# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಸಾರ್ವಜನಿಕ ಸಂಪರ್ಕ ಇಲಾಖೆ :: ಕೇಂದ್ರ ಕಛೇರಿ :: ಶಾಂತಿ ನಗರ :: ಬೆಂಗಳೂರು-27

## ಪತ್ರಿಕಾ ಪ್ರಕಟಣೆ

**ವಿಷಯ: ನೂತನ ಐರಾವತ ಕ್ಲಬ್ ಕ್ಲಾಸ್‌ನ 23 ಬಸ್ಸುಗಳ ಉದ್ಘಾಟನೆ ಹಾಗೂ ಸಾರಿಗೆ ಇಲಾಖೆಯ ಕಳೆದ 4 ವರ್ಷಗಳ ಸಾಧನೆಯ ಕೈಪಿಡಿ ಬಿಡುಗಡೆ ಸಮಾರಂಭ**

ಕೆಎಸ್‌ಆರ್‌ಟಿಸಿಯ ನೂತನ ಐರಾವತ ಕ್ಲಬ್ ಕ್ಲಾಸ್‌ನ 23 ಬಸ್ಸುಗಳ ಉದ್ಘಾಟನೆ ಹಾಗೂ ಸಾರಿಗೆ ಇಲಾಖೆಯ ಕಳೆದ 4 ವರ್ಷಗಳ ಸಾಧನೆಯ ಕೈಪಿಡಿ ಬಿಡುಗಡೆ ಸಮಾರಂಭವನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ.ಸಿದ್ಧರಾಮಯ್ಯರವರು, ಶ್ರೀ. ಹೆಚ್.ಎಂ.ರೇವಣ್ಣ, ಮಾನ್ಯ ಸಾರಿಗೆ ಸಚಿವರು, ಶ್ರೀ.ರಾಮಲಿಂಗಾರೆಡ್ಡಿ, ಮಾನ್ಯ ಗೃಹ ಸಚಿವರು, ಹಾಗೂ ಶ್ರೀ.ಕೆ.ಗೋಪಾಲ ಪೂಜಾರಿ, ಮಾನ್ಯ ಶಾಸಕರು ಮತ್ತು ಅಧ್ಯಕ್ಷರು, ಕೆಎಸ್‌ಆರ್‌ಟಿಸಿ ರವರು ದಿನಾಂಕ: 13-09-2017 ರಂದು ಬೆಳಗ್ಗೆ 10.00 ಗಂಟೆಗೆ ಬೆಂಗಳೂರಿನ ವಿಧಾನಸೌಧ ಗ್ರ್ಯಾಂಡ್ ಸ್ಟೆಪ್ಸ್ (ಹೈಕೋರ್ಟ್ ಮುಂಭಾಗ) ದಲ್ಲಿ ನೆರವೇರಿಸಿದರು.

ಮಾನ್ಯ ಉಪಾಧ್ಯಕ್ಷರು, ಕೆಎಸ್‌ಆರ್‌ಟಿಸಿ, ಮಂಡಳಿ ನಿರ್ದೇಶಕರುಗಳು, ಶ್ರೀ. ಸುಭಾಷ್ ಚಂದ್ರ ಕುಂಟಿಯಾ ಭಾಆಸೇ, ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಡಾ.ಬಿ.ಬಸವರಾಜು ಭಾಆಸೇ, ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ ಹಾಗೂ ಶ್ರೀ.ಎಸ್.ಆರ್.ಉಮಾಶಂಕರ್, ಭಾಆಸೇ, ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಆರ್‌ಟಿಸಿ ಹಾಗೂ ಇನ್ನಿತರೆ ಗಣ್ಯ ವ್ಯಕ್ತಿಗಳು ಹಾಗೂ ಆಹ್ವಾನಿತರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರ ನೇತೃತ್ವದಲ್ಲಿ ಕಳೆದ 4 ವರ್ಷದ ಅವಧಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಹಲವು ಜನಪರ ಅಭಿವೃದ್ಧಿ ಯೋಜನೆಗಳು ಸಾಕಾರಗೊಂಡಿವೆ. ಅದರಲ್ಲಿಯೂ ಜನರ ಜೀವನಾಡಿಯಾದ ಸಾರಿಗೆ ಕ್ಷೇತ್ರವು ಹಿಂದೆಂದೂ ಕಂಡರಿಯದಂತಹ ಹಲವು ಪ್ರಥಮಗಳಿಗೆ ನಾಂದಿ ಹಾಡುವ ಮೂಲಕ ರಾಷ್ಟ್ರದಲ್ಲಿಯೇ ಅಗ್ರಗಣ್ಯ ಸಾರಿಗೆ ವ್ಯವಸ್ಥೆಯಾಗಿ ಹೊರಹೊಮ್ಮಿದೆ.

ಮಾನ್ಯ ಮುಖ್ಯ ಮಂತ್ರಿಯವರು ಸಾರ್ವಜನಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸಾರಿಗೆ ನಿಗಮಗಳ ಅಭಿವೃದ್ಧಿಗಾಗಿ ಹೆಚ್ಚಿನ ಅನುದಾನ ನೀಡಿಕೆ ಮತ್ತು ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾರೆ. ಸಾರಿಗೆ ಕ್ಷೇತ್ರದಲ್ಲಿ 4 ವರ್ಷದ ಸಾಧನೆಗೆ ಸಂದ ಪ್ರಶಸ್ತಿಗಳು "ದ್ವಿಶತಕ" ವನ್ನು ಪೂರೈಸಿರುವುದು ಹೆಮ್ಮೆಯ ಸಂಗತಿ.

**ನೂತನ ಐರಾವತ ಕ್ಲಬ್ ಕ್ಲಾಸ್ ಬಸ್ಸುಗಳು:**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಪ್ರಪ್ರಥಮ ಬಾರಿಗೆ ಉತ್ತಮ Leg Room ವ್ಯವಸ್ಥೆ ಹೊಂದಿರುವ 14.5 ಹಾಗೂ 13.8 ಮೀಟರ್ ಉದ್ದಳತೆಯ ವೋಲ್ವೋ ಬಿಎಸ್–IV ವಾಹನಗಳನ್ನು ಪ್ರಾರಂಭಿಸುತ್ತಿದೆ.

## ನೂತನ ವೋಲ್ವೊ ಬಿ.ಎಸ್.–4 ವಾಹನಗಳಲ್ಲಿ ಕಂಡು ಬರುವ ಪ್ರಮುಖ ವೈಶಿಷ್ಟತೆಗಳು

1. ಕ.ರಾ.ರ.ಸಾ.ನಿಗಮವು ಪ್ರಪ್ರಥಮ ಬಾರಿಗೆ ದೂರ ಪ್ರಯಾಣದ ಪ್ರಯಾಣಿಕರ ಆರಾದಾಯಕ ಪ್ರಯಾಣಕ್ಕೆ, ಉತ್ತಮ Leg Room ವ್ಯವಸ್ಥೆ ಹೊಂದಿರುವ 13.8 (47 ಸೀಟುಗಳು) ಹಾಗೂ 14.5 ಮೀಟರ್ ಉದ್ದಳತೆಯ ಐರಾವತ ಬಿ.ಎಸ್.–4 ವಾಹನ(51 ಸೀಟುಗಳುಗಳನ್ನು ಪರಿಚಯಿಸುತ್ತಿದೆ. ಪ್ರಸ್ತುತವಿರುವ ಬಸ್ಸುಗಳಲ್ಲಿ 47 ಸೀಟುಗಳಿವೆ.

2. ಈ ವಾಹನಗಳಲ್ಲಿ, ಎಲೆಕ್ಟ್ರಾನಿಕ್ ನಿಯಂತ್ರಿತ ಉಪಕರಣದೊಂದಿಗೆ ನವೀನ ಬಿ.ಎಸ್.–4 ಇಂಜಿನ್ ಅನ್ನು ಅಳವಡಿಸಲಾಗಿದೆ.

3. ಸದರಿ ವಾಹನಗಳು ಮಾನವ ಚಾಲಿತ ಹಾಗೂ ಹೆಚ್ಚಿನ ಜಾಣ ಸ್ವಯಂ ಚಾಲಿತ ಗೇರ್ ಶಿಫ್ಟ್ ಬದಲಾವಣೆ ವ್ಯವಸ್ಥೆಯನ್ನು ಹೊಂದಿರುತ್ತದೆ.

4. ಈ ವಾಹನಗಳು ಸಣ್ಣ ತಿರುವುಗಳು ಮತ್ತು ತೀಕ್ಷ್ಣ ತಿರುವು ರಸ್ತೆಗಳಲ್ಲಿ ಸುಲಲಿತವಾಗಿ ಚಲಿಸಲು ಅನುಕೂಲವಾಗುವಂತೆ ಹಾಗೂ ಉತ್ತಮ ಮತ್ತು ಆರಾಮದಾಯಕ ಚಾಲನೆ ವ್ಯವಸ್ಥೆಗಾಗಿ Steerable Rear Tag Axle ಅನ್ನು ಹೊಂದಿರುತ್ತದೆ.

5. ಎಲೆಕ್ಟ್ರಾನಿಕ್ ನಿಯಂತ್ರಿತ ಸಸ್ಪೆನ್ಷನ್ ವ್ಯವಸ್ಥೆಯೊಂದಿಗೆ ಸಾರ್ವಜನಿಕ ಪ್ರಯಾಣಿಕರಿಗೆ ಹೆಚ್ಚಿನ ಸುಖಕರ ಪ್ರಯಾಣವನ್ನು ಒದಗಿಸಲಿರುತ್ತದೆ.

6. ಎಲೆಕ್ಟ್ರಾನಿಕ್ ನಿಯಂತ್ರಿತ ABS (Anti Roll Breaking System) ಬ್ರೇಕ್ ವ್ಯವಸ್ಥೆಯನ್ನು ಹೊಂದಿರುತ್ತದೆ.

7. 13.8 ಹಾಗೂ 14.5 ಮೀ. ಉದ್ದಳತೆಯುಳ್ಳ ಸದರಿ ನೂತನ ವೋಲ್ವೊ ಬಿ.ಎಸ್.–4 ವಾಹನಗಳು, ಕ್ರಮವಾಗಿ 370 HP ಹಾಗೂ 410 HP ಇಂಜಿನ್‌ಗಳನ್ನು ಹೊಂದಿದ್ದು, ಹೆಚ್ಚಿನ ಟಾರ್ಕ್ ಹೊಂದಿರುವುದರೊಂದಿಗೆ, ಇಂಧನ ಕ್ಷಮತೆ ಹಾಗೂ ಹೆಚ್ಚಿನ ಬಾಳಿಕೆಯನ್ನು ಹೊದಿರುತ್ತದೆ.

8. ಸದರಿ ನೂತನ ಬಿ.ಎಸ್.–4 ವೋಲ್ವೊ ವಾಹನಗಳು ಭಾರತ ಸರ್ಕಾರ, AIS-52 Bus Body Specification ನಂತೆ ತೀಕ್ಷ್ಣ ಸುರಕ್ಷತಾ ಲಕ್ಷಣಗಳೊಂದಿಗೆ ನಿರ್ಮಿತಗೊಂಡಿರುತ್ತವೆ.

9. ಬಸ್ಸಿನಲ್ಲಿ 3 ಟಿವಿಗಳಿವೆ. ಟಿಕೇಟ್ ದರದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಪ್ರತಿ ಬಸ್ಸಿನ ಬೆಲೆ 1 ಕೋಟಿ 7 ಲಕ್ಷಗಳು

**ಈ ನೂತನ ಬಸ್ಸುಗಳನ್ನು ಈ ಕೆಳಕಂಡ ಮಾರ್ಗಗಳಲ್ಲಿ ಕಾರ್ಯಾಚರಣೆ ಮಾಡಲಾಗುವುದು :-**

**ಅ) ಬೆಂಗಳೂರು ಕೇಂದ್ರೀಯ ವಿಭಾಗದಿಂದ 8 ಬಸ್ಸುಗಳು**

- ಬೆಂಗಳೂರು – ಕ್ಯಾಲಿಕೆಟ್ : 2 ಬಸ್ಸುಗಳು
- ಬೆಂಗಳೂರು – ಚೆನ್ನೈ : 2 ಬಸ್ಸುಗಳು
- ಬೆಂಗಳೂರು – ವಿಜಯವಾಡ : 2 ಬಸ್ಸುಗಳು
- ಬೆಂಗಳೂರು – ಶ್ರೀಹರಿಕೋಟ : 2 ಬಸ್ಸುಗಳು

**ಆ) ಮಂಗಳೂರು ವಿಭಾಗ : 7 ಬಸ್ಸುಗಳು**

- ಮಂಗಳೂರು – ಬೆಂಗಳೂರು – ಮಣಿಪಾಲ್ : 3 ಬಸ್ಸುಗಳು
- ಮಂಗಳೂರು – ಮುಂಬೈ : 2 ಬಸ್ಸುಗಳು
- ಮಂಗಳೂರು – ಬೆಂಗಳೂರು : 2 ಬಸ್ಸುಗಳು

**ಇ) ಮೈಸೂರು ವಿಭಾಗ: 8 ಬಸ್ಸುಗಳು**

- ವಿರಾಜಪೇಟೆ – ಬೆಂಗಳೂರು : 1 ಬಸ್ಸುಗಳು
- ಮಡಿಕೇರಿ – ಬೆಂಗಳೂರು : 2 ಬಸ್ಸುಗಳು
- ಮೈಸೂರು – ಬೆಂಗಳೂರು : 5 ಬಸ್ಸುಗಳು

- ಕ.ರಾ.ರ.ಸಾ.ನಿಗಮವು ದೇಶದ ಸಾರಿಗೆ ನಿಗಮಗಳಲ್ಲಿಯೇ ಅಗ್ರಗಣ್ಯ ಸಾರಿಗೆ ನಿಗಮವಾಗಿ ಹೊರಹೊಮ್ಮಿದ್ದು, ಸಾರಿಗೆ ಕ್ಷೇತ್ರದಲ್ಲಿ ಹೊಸ ಆಯಾಮ ಸೃಷ್ಟಿಸಿದೆ. ಕಳೆದ **4 ವರ್ಷಗಳ** ಅವಧಿಯಲ್ಲಿ ಪ್ರತಿಷ್ಠಿತ ವಾಹನಗಳಾದ ಐರಾವತ ಕ್ಲಬ್ ಕ್ಲಾಸ್, ಐರಾವತ ಡೈಮಂಡ್ ಕ್ಲಾಸ್, ರಾಜಹಂಸ ಮತ್ತು ನೂತನ ನಗರ ಸಾರಿಗೆ ವಾಹನ ಸೇರಿದಂತೆ ಒಟ್ಟಾರೆ 2921 ಹೊಸ ವಾಹನಗಳನ್ನು ಸೇರ್ಪಡೆಗೊಳಿಸಿದೆ.

- **ಕಳೆದ 4 ವರ್ಷಗಳಲ್ಲಿ ನಾಲ್ಕು ನಿಗಮಗಳ ವ್ಯಾಪ್ತಿಯಲ್ಲಿ** 76 ಹೊಸ ಬಸ್ ನಿಲ್ದಾಣಗಳು, 40 ಹೊಸ ಬಸ್ ಡಿಪೋಗಳು, 36 ನಗರಗಳಲ್ಲಿ 653 ನಗರ ಸಾರಿಗೆ ಬಸ್‌ಗಳ ಕಾರ್ಯಾಚರಣೆ, ಪ್ರತಿ ದಿನ 1.15 ಕೋಟಿ ಪ್ರಯಾಣಿಕರಿಗೆ ಸಾರಿಗೆ ಸೇವೆ, 7333 ಹೊಸ ಬಸ್ಸುಗಳು, 371ಜೆ ಅಡಿಯಲ್ಲಿ 3475 ನೇಮಕಾತಿ, 24471 ನೇಮಕಾತಿ ಮಾಡಲಾಗಿದೆ.

- **ಹೊಸ ಬಸ್ಸುಗಳ ಸೇರ್ಪಡೆ :** 4 ನಿಗಮಗಳಿಂದ ಕಳೆದ 4 ವರ್ಷ 4ತಿಂಗಳುಗಳ ಅವಧಿಯ 7333 ಬಸ್‌ಗಳನ್ನು ಸೇರ್ಪಡೆಗೊಳಿಸಲಾಗಿದೆ

- **ನೇಮಕಾತಿ :** ನಾಲ್ಕು ನಿಗಮಗಳು ಕಳೆದ 4 ವರ್ಷ 4ತಿಂಗಳುಗಳ ಅವಧಿಯಲ್ಲಿ 24471 ಸಿಬ್ಬಂದಿಗಳ ನೇಮಕಾತಿಯನ್ನು ಮಾಡಿದ್ದು, 371ಜೆ ಅಡಿಯಲ್ಲಿ 3475 ನೇಮಕಾತಿ ಆಗಿದೆ.

- **ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ:** ಮಂಡ್ಯ, ದಾವಣಗೆರೆ, ಮಂಗಳೂರು, ಪುತ್ತೂರು, ಶಿವಮೊಗ್ಗ ವಿಭಾಗಗಳ ವ್ಯಾಪ್ತಿಯ ಪ್ರಮುಖ ತಾಲ್ಲೂಕು ಕೇಂದ್ರದ ಬಸ್ ನಿಲ್ದಾಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಲಾಗುತ್ತಿದೆ. ಪ್ರಯಾಣಿಕರಿಗೆ 1ಲೀಟರ್ ನೀರಿಗೆ 1ರೂ ನಂತೆ ನೀಡುವ ವ್ಯವಸ್ಥೆಯನ್ನು ಮುಂದಿನ ತಿಂಗಳಿನಿಂದ ಜಾರಿಗೆ ತರಲಾಗುತ್ತಿದೆ.

- **ಹೊಸ ವಿಭಾಗಗಳ ಪ್ರಾರಂಭ :-** ಬಹುದಿನದ ಬೇಡಿಕೆಯಾದ **ಶಿವಮೊಗ್ಗ ನೂತನ ವಿಭಾಗವನ್ನು ದಿನಾಂಕ:29.06.2017ರಂದು ಪ್ರಾರಂಭಿಸಲಾಗಿದೆ. ಚಿತ್ರದುರ್ಗ ನೂತನ ವಿಭಾಗ** ಶೀಘ್ರಲ್ಲಿಯೇ ಆರಂಭವಾಗುವುದು.

- **ಬಸ್‌ನಿಲ್ದಾಣ / ಬಸ್‌ಘಟಕಗಳನ್ನು ನಿರ್ಮಿಸಲು ಸರ್ಕಾರದಿಂದ ಉಚಿತ ನಿವೇಶನ :-** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಸಾರ್ವಜನಿಕರ ಅನುಕೂಲಕ್ಕಾಗಿ ಬಸ್ ನಿಲ್ದಾಣ, ಬಸ್ ಘಟಕ ಮುಂತಾದ ಹಲವಾರು ಸಾರಿಗೆಮೂಲಭೂತ ಸೌಕರ್ಯಗಳನ್ನು ನಿರ್ಮಿಸುತ್ತಿದೆ. ಸದರಿ ಉದ್ದೇಶಕ್ಕಾಗಿ ಸಾರಿಗೆ ನಿಗಮಕ್ಕೆ ನಿವೇಶನಗಳ ಅವಶ್ಯಕತೆ ಇದ್ದು, ಸದರಿ ನಿವೇಶನಗಳನ್ನು ಇಲ್ಲಿಯವರೆಗೂ ಭೂಸ್ವಾಧೀನ ದರಗಳಂತೆ ಅಥವಾ ಖಾಸಗಿ ನಿವೇಶನಗಳಾಗಿದ್ದಲ್ಲಿ ಭೂಸ್ವಾಧೀನ ಮಾರುಕಟ್ಟೆ ದರ ಪಾವತಿಸಿ ಮತ್ತು ಸರ್ಕಾರಿ ನಿವೇಶನಗಳಾಗಿದ್ದಲ್ಲಿ ಶೇ.50 ನ್ನು ಪಾವತಿಸಿ ಪಡೆಯಲಾಗುತ್ತಿತ್ತು. ಪ್ರಸ್ತುತ ಸದರಿ ನಿವೇಶನಗಳನ್ನು ಉಚಿತವಾಗಿ ಸರ್ಕಾರವು ಒದಗಿಸುತ್ತಿದೆ.

- **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿ ಉಚಿತ ಬಸ್ ಪಾಸುಗಳು :-** ರಾಜ್ಯ ಸಾರಿಗೆ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆಯಡಿಯಲ್ಲಿ ವಿದ್ಯಾರ್ಥಿ ರಿಯಾಯಿತಿ ಪಾಸುಗಳನ್ನು ವಿತರಣೆ ಮಾಡಲಾಗುತ್ತಿದೆ. ಈ ಸಂಬಂಧ ರಾಜ್ಯ ಸರ್ಕಾರ ಶೇ.50 ರಷ್ಟು, ವಿದ್ಯಾರ್ಥಿಗಳಿಂದ ಶೇ.25ರಷ್ಟು ಮತ್ತು ಸಾರಿಗೆ ಸಂಸ್ಥೆಗಳು ಶೇ.25 ರಷ್ಟು ವೆಚ್ಚವನ್ನು ಭರಿಸುತ್ತಿವೆ.

  2017-18 ನೇ ಸಾಲಿನಲ್ಲಿ ನಾಲ್ಕು ಸಾರಿಗೆ ನಿಗಮಗಳವತಿಯಿಂದ 18,35,345 ಪಾಸುಗಳನ್ನು ವಿತರಿಸಲು ಯೋಜಿಸಿದ್ದು, ಇವುಗಳಲ್ಲಿ ಶೇ.24.15 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿ (4,43,262)ಗಳಾಗಿದ್ದಾರೆ.

  ಪ್ರಸಕ್ತ ಸಾಲಿನಲ್ಲಿ ಎಸ್.ಸಿ.ಪಿ.ಮತ್ತು ಟಿ.ಎಸ್.ಪಿ.ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶೇ.50 ರಷ್ಟು ಬಸ್‌ಪಾಸ್ ವೆಚ್ಚದ ಮರುಪಾವತಿಗಾಗಿ 2017-18 ನೇ ಸಾಲಿನ ಸರ್ಕಾರದ ಆಯವ್ಯಯದಲ್ಲಿ ನಿಗಧಿಪಡಿಸಿರುವ ರೂ.208.76 ಕೋಟಿಗಳ ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ನೀಡಬೇಕಾಗಿರುವ ಶೇ.25 ರಷ್ಟು ಪಾಲು ಅಂದರೆ ರೂ.104.38 ಕೋಟಿಗಳ ಅನುದಾನವನ್ನು ಹೆಚ್ಚುವರಿಯಾಗಿ ಸರ್ಕಾರ ಒದಗಿಸಿರುತ್ತದೆ.

- **ಅಂತರ್ ನಿಗಮ ವರ್ಗಾವಣೆ :** ಕಳೆದ 12 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಹಾಗೂ ಬಹುವರ್ಷಗಳ ನೌಕರರ ಬೇಡಿಕೆಯಾದ ಅಂತರನಿಗಮ ವರ್ಗಾವಣೆಯನ್ನು ಅನುಷ್ಠಾನಗೊಳಿಸಲಾಗಿದೆ. ಅಂತರ್‌ನಿಗಮ ವರ್ಗಾವಣೆಗೆ ಸಂಬಂಧಿಸಿದಂತೆ, ನಾಲ್ಕು ನಿಗಮಗಳಿಂದ ಚಾಲಕ/ನಿರ್ವಾಹಕ, ತಾಂತ್ರಿಕ ಸಿಬ್ಬಂದಿ ಹಾಗೂ ಇನ್ನಿತರೆ ಆಡಳಿತ ಸಿಬ್ಬಂದಿಗಳಿಂದ ಒಟ್ಟು 18,978 ಅರ್ಜಿಗಳು ಸಲ್ಲಿಕೆಯಾಗಿದ್ದು, ಅದರಲ್ಲಿ ಊರ್ಜಿತವಾಗಿದ್ದ 14,604 ಅರ್ಜಿಗಳಲ್ಲಿ ಒಂದು ಬಾರಿ ಅಂತರ್‌ನಿಗಮ ವರ್ಗಾವಣೆಗೆ ಸಂಬಂಧಿಸಿದಂತೆ, ಒಟ್ಟು 3,718 ಚಾಲಕ/ನಿರ್ವಾಹಕ, ತಾಂತ್ರಿಕ ಸಿಬ್ಬಂದಿ ಇನ್ನಿತರೆ ಸಿಬ್ಬಂದಿಗಳನ್ನು ಜೇಷ್ಠತೆಯನುಸಾರ ಈ ಕೆಳಕಂಡಂತೆ ನಿಗಮವಾರು ವರ್ಗಾವಣೆ ಮಾಡಲಾಗಿರುವ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಲಾಗಿದೆ.

- **ರಿಯಾಯಿತಿ ಬಸ್ ಪಾಸ್ ವಿತರಣೆಗೆ ಸರ್ಕಾರದಿಂದ ಅತ್ಯಧಿಕ ಅನುದಾನ :** 2012–13 ರಲ್ಲಿ ಸರ್ಕಾರದವತಿಯಿಂದ ಸಾರಿಗೆ ಸಂಸ್ಥೆಗಳಿಗೆ ಮರುಪಾವತಿಯಾಗುತ್ತಿದ್ದ ಸಹಾಯ ಧನ ರೂ. 425.92 ಕೋಟಿಗಳು ಆದರೆ 2016–17 ರಲ್ಲಿ ಸರ್ಕಾರವು ಸಾರಿಗೆ ಸಂಸ್ಥೆಗಳಿಗೆ ಮರುಪಾವತಿಸಿದ ಸಹಾಯ ಧನ ರೂ.788 ಕೋಟಿಗಳಾಗಿದೆ.

- **ಸಣ್ಣ ಮತ್ತು ಮಧ್ಯಮ ನಗರ ಹಾಗೂ ಪಟ್ಟಣಗಳಲ್ಲಿ ನಗರ ಸಾರಿಗೆ ವ್ಯವಸ್ಥೆಯನ್ನು** ಜಾರಿಗೊಳಿಸಿದ ಪ್ರಪ್ರಥಮ ರಾಜ್ಯ ಕರ್ನಾಟಕವೆಂಬ ಕೀರ್ತಿಗೆ ನಮ್ಮ ರಾಜ್ಯ ಪಾತ್ರವಿದೆ. ರಾಜ್ಯದ 36 ಸಣ್ಣ ಮತ್ತು ಮಧ್ಯಮ ನಗರ ಹಾಗೂ ಪಟ್ಟಣಗಳಲ್ಲಿ ನಗರ ಸಾರಿಗೆಯನ್ನು ಈಗಾಗಲೇ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ.

  ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ವ್ಯಾಪ್ತಿಯ ಸಣ್ಣ ಮತ್ತು ಮಧ್ಯಮ ನಗರ ಹಾಗೂ ಪಟ್ಟಣಗಳಾದ ತುಮಕೂರು, ಕೋಲಾರ, ಕೆ.ಜಿ.ಎಫ್., ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ಮಂಗಳೂರು, ದಾವಣಗೆರೆ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಶಿವಮೊಗ್ಗ, ಭದ್ರಾವತಿ, ರಾಮನಗರ, ಉಡುಪಿ, ಚಾಮರಾಜನಗರಗಳಲ್ಲಿ ನಗರ ಸಾರಿಗೆ ಬಸ್ಸುಗಳು ಕಾರ್ಯಾಚರಣೆಯಾಗುತ್ತಿವೆ.

- **ನಾಲ್ಕು ನಿಗಮಗಳಿಗೆ ಸಿಬ್ಬಂದಿಗಳ ವೃಂದ ನಿರ್ವಹಣೆ ಸ್ವಾಯತ್ತತೆ:** ಅಧಿಕಾರಿಗಳು ಹಾಗೂ ಮೇಲ್ವಿಚಾರಕ ಸಿಬ್ಬಂದಿಯನ್ನು ಶಾಶ್ವತವಾಗಿ ನಾಲ್ಕು ನಿಗಮಗಳಿಗೆ ಹಂಚಿಕೆ ಮಾಡುವುದು ಹಾಗೂ ವೃಂದ ನಿರ್ವಹಣೆ ಅಧಿಕಾರವನ್ನು ಆಯಾ ನಿಗಮಗಳಿಗೆ ನೀಡುವ ಸಂಬಂಧ ಆದೇಶ ಹೊರಡಿಸಲಾಗಿದೆ.

- **ಫಾಸ್ಟ್‌ಟ್ಯಾಗ್ ಮತ್ತು ವೈ-ಫೈ ಸೇವೆ:** ನಿಗಮದ ಬಸ್ಸುಗಳಲ್ಲಿ ಫಾಸ್ಟ್‌ಟ್ಯಾಗ್‌ಗಳನ್ನು ಈ ಗಾಗಲೇ ಪ್ರಾಯೋಗಿಕವಾಗಿ ಅಳವಡಿಸಲಾಗಿದೆ. ಕರಾರಸಾನಿ, ಬೆಂಮಸಾಸಂ, ಮತ್ತು ಈಕರಸಾಸಂ ಪ್ರಮುಖ ಬಸ್‌ನಿಲ್ದಾಣ ಹಾಗೂ ಬಸ್‌ಗಳಲ್ಲಿ ಉಚಿತ ವೈ-ಫೈ ಸೇವೆಯನ್ನು ನೀಡಲು ಕ್ರಮಕೈಗೊಳ್ಳಲಾಗಿದೆ.

- **ಪ್ರಶಸ್ತಿ /ಪುರಸ್ಕಾರಗಳು:** 4 ನಿಗಮಗಳಿಂದ ಮೇ 2013 ರಿಂದ ಆಗಸ್ಟ್ 2017ರ ವರೆಗೆ 209 ಪ್ರಶಸ್ತಿಗಳು ಲಭಿಸಿರುತ್ತದೆ. 1998–2017 ರವರೆಗೂ ನಾಲ್ಕು ಸಾರಿಗೆ ನಿಗಮಗಳಿಗೆ 349 ಪ್ರಶಸ್ತಿಗಳು ಲಭಿಸಿದ್ದು, ಕೆಎಸ್‌ಆರ್‌ಟಿಸಿ ಸಂಸ್ಥೆಗೆ ಕಳೆದ 4 ವರ್ಷ 4ತಿಂಗಳಲ್ಲಿ 142 ಪ್ರಶಸ್ತಿಗಳು ಲಭಿಸಿರುತ್ತವೆ.

  - ಭಾರತ ಸರ್ಕಾರ ನಗರಾಭಿವೃದ್ಧಿ ಸಚಿವಾಲಯವು ನೀಡುವ ಪ್ರತಿಷ್ಠಿತ " ಅವಾರ್ಡ್ ಆಫ್ ಎಕ್ಸಲೆನ್ಸ್" ಪ್ರಶಸ್ತಿ ಸತತ 6ನೇ ಬಾರಿಗೆ
  - ದೇಶದ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ನೀಡುವ ಭಾರತ ಸರ್ಕಾರದ ಅತ್ಯುನ್ನತ "ರಾಷ್ಟ್ರೀಯ **e- Governance** ಸ್ವರ್ಣ ಪ್ರಶಸ್ತಿ
  - ಸತತ 4ನೇ ಬಾರಿಗೆ ಅಂತರಾಷ್ಟ್ರೀಯ ಸಾರ್ವಜನಿಕ ಸಾರಿಗೆ (**UITP**) ಪ್ರಶಸ್ತಿಯನ್ನು ಪಡೆದ ದೇಶದ ಏಕೈಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಾಗಿದೆ

ಮುಂದುವರೆದು, ಮೂಲಭೂತ ಸೌಲಭ್ಯಗಳಲ್ಲಿ ಸಾರಿಗೆಯು ಒಂದಾಗಿದ್ದು, ಇದೇ ಮೊದಲ ಬಾರಿಗೆ 2016–17 ರಲ್ಲಿ ಬಿಎಂಟಿಸಿಗೆ 1000 ಬಸ್ಸುಗಳಿಗೆ ಬಡ್ಡಿ ಮರು ಪಾವತಿಸಲು ಅನುದಾನ ರೂ.153 ಕೋಟಿ, ನಾಲ್ಕು ಸಾರಿಗೆ ನಿಗಮಗಳಿಗೆ ರಿಯಾಯಿತಿ ಬಸ್ ಪಾಸುಗಳ ವಿತರಣೆಯ ಮರುಪಾವತಿಗೆ ಅತೀ ಹೆಚ್ಚಿನ ಅನುದಾನ ರೂ.788 ಕೋಟಿ, 2017–18 ರಲ್ಲಿ ಬಿಎಂಟಿಸಿಗೆ ಸುಮಾರು 1500 ಹೊಸ ಬಸ್ಸುಗಳ ಖರೀದಿಗೆ ಅನುದಾನ, ಹಾಗೂ ರಾಜ್ಯದ ವಿವಿಧ ಭಾಗಗಳಲ್ಲಿ ಬಸ್ ನಿಲ್ದಾಣ ಮತ್ತು ಬಸ್ ಘಟಕಗಳನ್ನು ನಿರ್ಮಿಸಲು ಸರ್ಕಾರದಿಂದ ಉಚಿತ ನಿವೇಶನ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಲಭ್ಯ ಹೀಗೆ ಹತ್ತು ಹಲವು ಕ್ರಾಂತಿಕಾರಿ ಯೋಜನೆಗಳಿಗೆ ನಿರಂತರ ಸಹಕಾರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ನೀಡುತ್ತಿದ್ದಾರೆ.

ಮುಂದಿನ ನಮ್ಮ ಪಯಣದಲ್ಲಿ ಸಾರ್ವಜನಿಕರಿಗೆ ಇನ್ನೂ ಹೆಚ್ಚಿನ ಸಮಗ್ರ ಸಾರಿಗೆ ಸೌಲಭ್ಯ ಒದಗಿಸುವ ದೃಢ ಸಂಕಲ್ಪ ನಮ್ಮದಾಗಿದೆ.

**ಸಹಿ/–**

**ಸಾರ್ವಜನಿಕ ಸಂಪರ್ಕಾಧಿಕಾರಿ**